ದಿನಾಂಕಃ 03-03-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್. ಪಿ. ವಕೀಲರಿಂದ

5. 2022 ನೇ ಇಸವಿಯಲ್ಲಿ ನಾನು ನಮ್ಮ ಊರಾದ ನಾಗಮಂಗಲದಲ್ಲಿ ವಾಸ ಮಾಡಿಕೊಂಡಿದ್ದೆನು. ಆ ಸಮಯದಲ್ಲಿ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. 2022 ನೇ ಇಸವಿಯಲ್ಲಿ ನನ್ನ ಬಳಿ 5 ಲಕ್ಷ ರೂಪಾಯಿ ಇತ್ತು ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಬಳಿ ಇದ್ದ 5 ಲಕ್ಷ ರೂಪಾಯಿಗಳ ಪೈಕಿ 3 ಲಕ್ಷ ರೂಪಾಯಿಗಳು ನನ್ನ ಉಳಿತಾಯದ ಹಣವಾಗಿದ್ದು 2 ಲಕ್ಷ ರೂಪಾಯಿಗಳನ್ನು ನಾನು ನನ್ನ ತಂದೆಯಿಂದ ಪಡೆದುಕೊಂಡಿದ್ದೆನು. 2022 ನೇ ಇಸವಿಯಲ್ಲಿ ನಮ್ಮ ಮನೆಯಲ್ಲಿ ನಾನು ನನ್ನ ತಂದೆ ತಾಯಿ ವಾಸ ಮಾಡಿಕೊಂಡಿದ್ದೆವು. ಆ ಸಮಯದಲ್ಲಿ ನನಗೆ ಮದುವೆ ಆಗಿರಲಿಲ್ಲ. 2022 ನೇ ಇಸವಿಯಲ್ಲಿ ನನ್ನ ತಂದೆ ಹೇರ್ ಕಟಿಂಗ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಅಂಗಡಿ ನನ್ನ ದೂರ ಸಂಬಂಧಿಯ ಅಂಗಡಿ ಇರುತ್ತದೆ. ಸದರಿ ಅಂಗಡಿ ನಾಗಮಂಗಲದ ಹೇಮಾವತಿ ಗೇಟ್ ನಲ್ಲಿ ಇರುತ್ತದೆ.

6. ಆರೋಪಿ ನನಗೆ ನನ್ನ ತಂದೆಯ ಕಡೆಯಿಂದ ಸಂಬಂಧಿ ಆಗಬೇಕು. ನಾನು ಆರೋಪಿಯ ಮನೆಗೆ ಹೋಗುವುದು ಬರುವುದು ಮಾಡಿರುವುದಿಲ್ಲ. 2022 ನೇ ಇಸವಿಯಲ್ಲಿ ನಮ್ಮ ಮನೆಗೆ ತಿಂಗಳಿಗೆ 2 ರಿಂದ 3 ಸಾವಿರ ರೂಪಾಯಿಗಳ ಖರ್ಚು ಆಗುತ್ತಿತ್ತು. ಆ ಸಮಯದಲ್ಲಿ ನಮ್ಮ ಮನೆಯ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. 5 ಲಕ್ಷ ರೂಪಾಯಿಗಳನ್ನು ನಾವು ಬ್ಯಾಂಕಿನಿಂದ ನಗದೀಕರಿಸಿಕೊಂಡಿರಲಿಲ್ಲ. ಸದರಿ ಹಣ ನಮ್ಮ ಮನೆಯಲ್ಲಿಯೇ ಇತ್ತು.

7. ನಾನು ಬೆಂಗಳೂರಿನಲ್ಲಿ ಮಾರುತಿ ಸನ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ಸದರಿ ಕಂಪನಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆನು ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

8. ಆರೋಪಿಯು 2022 ಸೆಪ್ಟೆಂಬರ್ 2ನೇ ವಾರದಲ್ಲಿ ನನ್ನಿಂದ ಹಣ ಕೇಳಿದ್ದರು ಆದರೆ ಯಾವ ದಿನಾಂಕ ಎಂಬುದು ನನಗೆ ನಿಖರವಾಗಿ ನೆನಪಿಲ್ಲ. ನಾನು ಆರೋಪಿಗೆ ಹಣ ನೀಡಿದ 15 ದಿನಗಳ ಮೊದಲು ಆರೋಪಿ ನನ್ನಿಂದ ಹಣ ಕೇಳಿದ್ದರು. ನಾನು 2022 ಸೆಪ್ಟೆಂಬರ್ ಕೊನೇಯ ವಾರದಲ್ಲಿ ಆರೋಪಿಗೆ ಹಣ ನೀಡಿದ್ದೆನು ಯಾವ ದಿನಾಂಕ ಎಂಬುದು ನನಗೆ ನಿಖರವಾಗಿ ನೆನಪಿಲ್ಲ. ನನ್ನ ಅಥವಾ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

9. ಆರೋಪಿಯು ಹೇರ್ ಕಟಿಂಗ್ ಶಾಪ್ ನ್ನು ಹೊಂದಿದ್ದು ಅದನ್ನು ಅಭಿವೃದ್ಧಿ ಪಡಿಸುವ ಮತ್ತು ಡೆಕೋರೇಷನ್ ಮಾಡಿಸುವ ಉದ್ದೇಶದಿಂದ ನನ್ನಿಂದ ಹಣ ಕೇಳಿದ್ದರು. ನಾನು ಬಿ.ಪಿ.ಎಲ್. ಕಾರ್ಡ್ ನ್ನು ಹೊಂದಿರುತ್ತೇನೆ. ನಾನು ನಾಗಮಂಗಲದ ಅಂದಿನ ಕಾರ್ಪೋರೇಷನ್ ಬ್ಯಾಂಕ್ ಹಾಗೂ ಇಂದಿನ ಯೂನಿಯನ್ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಸದರಿ ಬ್ಯಾಂಕ್ ಖಾತೆಯಲ್ಲಿ ನಾನು ವ್ಯವಹಾರ ಮಾಡಿರುತ್ತೇನೆ.

10. ಆರೋಪಿಯು ನಿಪಿ.1 ರ ಚೆಕ್ಕನ್ನು ನನ್ನ ಮನೆಯಲ್ಲಿ ನನಗೆ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ನನ್ನ ತಂದೆ ಇದ್ದೆವು. ನಿಪಿ.1 ರಲ್ಲಿ ಇರುವ ಬರವಣಿಗೆಗಳನ್ನು ಯಾರು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಆದರೆ ನಿಪಿ.1 ರ ಚೆಕ್ಕಿಗೆ ಆರೋಪಿ ನನ್ನ ಎದುರು ಸಹಿ ಮಾಡಿರುತ್ತಾರೆ.

11. ನಾಗಮಂಗಲದ ಮೈಸೂರು - ತುಮಕೂರು ರಸ್ತೆಯಲ್ಲಿ ಸಂಗೀತಾ ಢಾಬಾ ಇರುತ್ತದೆ ಎಂದರೆ ಸರಿ. ಅದರ ಮಾಲೀಕರ ಹೆಸರು ರವಿ ಇರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಸದರಿ ಢಾಬಾದಲ್ಲಿ ಸಪ್ಲೈರ್ ಆಗಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ನಾಗಮಂಗಲದ ಟಿ. ಬಿ. ಬಡಾವಣೆಯಲ್ಲಿ ಒಂದು ಹೇರ್ ಕಟಿಂಗ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ಆ ರೀತಿ ನಾನು ಹೇರ್ ಕಟಿಂಗ್ ಅಂಗಡಿ ಹಾಗೂ ಸದರಿ ಢಾಬಾದಲ್ಲಿ 2020 ರಿಂದ 2022 ನೇ ಇಸವಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಸಂಗೀತಾ ಢಾಬಾದ ಮಾಲೀರಾದ ರವಿ ರವರಿಗೆ ದೇವಲಾಪುರದ ಚೇತನ್ ಎಂಬುವವರು ಸ್ನೇಹಿತರು ಎಂಬುದು ನನಗೆ ಗೊತ್ತಿಲ್ಲ. ಸದರಿ ಚೇತನ್ ರವರು

ದೇವಲಾಪುರದ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಸದರಿ ಚೇತನ್ ಸ್ನೇಹಿತರು ಎಂಬುದು ನನಗೆ ಗೊತ್ತಿಲ್ಲ. ಸದರಿ ಚೇತನ್, ರವಿ ಹಾಗೂ ಆರೋಪಿ ಸೇರಿ ದೇವಲಾಪುರದಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯು ಭದ್ರತೆಗಾಗಿ ನಿಪಿ.1 ರ ಚೆಕ್ಕನ್ನು ಚೇತನ್ ರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಚೇತನ್ ರವರು ರವಿ ರವರಿಗೆ ನೀಡಿದ್ದು ನಾನು ಸಂಗೀತಾ ಢಾಬಾದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಸಂಗೀತಾ ಢಾಬಾದ ಮಾಲೀರಾದ ರವಿ ರವರು ಸದರಿ ಚೆಕ್ಕನ್ನು ನನಗೆ ನೀಡಿ ನನ್ನ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

12. ಟಿ. ಬಿ. ಬಡಾವಣೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಹೇರ್ ಕಟಿಂಗ್ ಅಂಗಡಿಯ ಮಾಲೀಕರ ಹೆಸರು ಮಂಜುನಾಥ ಇರುತ್ತದೆ. ಅವರೂ ಸಹ ದೇವಲಾಪುರ ಗ್ರಾಮದವರು ಇರುತ್ತಾರೆ ಎಂದರೆ ಸರಿ.

13. ಆರೋಪಿ ನನಗೆ ಯಾವುದೇ ರೀತಿಯಿಂದಲೂ ಸಂಬಂಧಿಕರು ಅಗಿರುವುದಿಲ್ಲ, ನನ್ನ ಹಾಗೂ ಅರೋಪಿಯ ನಡುವೆ ಯಾವುದೇ ಪರಿಚಯ ಇರುವುದಿಲ್ಲ ಹಾಗೂ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಪಡೆಯುತ್ತಿದ್ದ ಸಂಬಳದ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಕಂಪನಿಯವರು ನಗದು ರೂಪದಲ್ಲಿ ಸಂಬಳ ನೀಡುತ್ತಿದ್ದರು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.